# ಮೊದಲ ಬಾರಿ ಕಡಲು ನೋಡಿದ್ದು!

**ಜೀವನದಲ್ಲಿ ಮೊದಲ ಬಾರಿಗೆ ಕಡಲನ್ನು ನೋಡಿದ್ದು, ಉಪ್ಪು ನೀರಿನಲ್ಲಿ ಮನಸೋ ಇಚ್ಛೆ ಆಡಿದ್ದು, ಕಡಲಲೆಗಳಿಗೆ ಮೈಯಾನಿಸಿ ಖುಷಿಪಟ್ಟದ್ದು, ಸೂರ್ಯಾಸ್ತದ ಸೊಬಗನ್ನು ಕಣ್ಣು ಎಟಕುವಷ್ಟು ನೀರಿನ ಮಧ್ಯೆ ನೋಡಿ ಸಂಭ್ರಮಿಸಿದ್ದು ಎಲ್ಲವೂ ಸವಿನೆನಪು. ಜೊತೆಗೆ ರೋಮಾಂಚಕ ಅನುಭವ.**

**■ ಸುಮಂತ್ ಮಂಗನಹಳ್ಳಿ**



ಜೀವನದಲ್ಲೇ ಮೊದಲಿಗೆ ಕಡಲನ್ನು ಕಂಡ ಅಪೂರ್ವ ಕ್ಷಣ. ಅದು 2004ರ ಏಪ್ರಿಲ್ 21. ನಾನು, ಅಮ್ಮ ಮತ್ತು ಅಮ್ಮನ ಒಡಹುಟ್ಟಿದವರ ಕುಟುಂಬ ಮಲ್ಪೆ ಕಡಲ ತೀರಕ್ಕೆ ಬಂದೆವು. ಮೇರೆಯಿರದ ವಿಶಾಲ ಜಲಧಾರೆಯನ್ನು ಕಣ್ಣಿನಲ್ಲಿ ನೋಡಿದಾಗ ಹರುಷ ಕಡಲಿನಷ್ಟೇ ಏರಿಳಿತದಿಂದ ಉಕ್ಕಿ ಹರಿಯಿತು. ಅ ಜಲವೈಭವ ನೋಡಿದ ಸವಿನೆನಪು ಇಂದಿಗೂ ಮನದಾಳದಲ್ಲಿ ಹಸಿರಾಗಿಯೇ ಉಳಿದಿದೆ.

ಬದುಕಿನ ದುಗುಡ ,ಕಡಲಿನ ಅಲೆಯ ಹೊಡೆತಕ್ಕೆ ಸಿಲುಕಿ ಮರೆತುಹೋದ ವಿಸ್ಮಯ. ಪ್ರಯಾಣದ ಆಯಾಸದಿಂದ ಮುದುಡಿದ್ದ ಮನಸ್ಸುಗಳು ಗರಿಗೆದರಿ ಹಾರತೊಡಗಿದ್ದು ಸುಳ್ಳಲ್ಲ. ಕಡಲನ್ನು ಕಂಡ ಪುಟ್ಟ ತಂಗಿ ಧೃತಿಯ ಮುಖ ಹೂವಾಗಿ ಅರಳಿತು. ಆ ಚೇತೋಹಾರಿ ನಗುವ ಕಂಡರೆ ಕ್ಯಾನ್ಸರ್ ವಾಸಿಯಾಗುತ್ತದೆಂದರೆ ಖಂಡಿತ ಉತ್ಪ್ರೇಕ್ಷೆಯಲ್ಲ. ಏಕೆಂದರೆ ಕ್ಯಾನ್ಸರ್ ಆ ಸಂತೋಷವನ್ನು ಹುಡುಕುತ್ತ ರೋಗಿಯನ್ನು ಬಿಟ್ಟು ಸಮುದ್ರದತ್ತ ಹೊರಡುತ್ತದೆಂದು ನನ್ನ ನಂಬಿಕೆ. ತಡಿಯಲ್ಲಿ ಮೈಚಾಚಿ ಮಲಗಿದ ಬಿಳಿಮರಳಿನಲ್ಲಿ ಆಡುತ್ತಿದ್ದ ಬಿಳಿ ಏಡಿ ಮರಿಗಳು ಸತ್ತ ಚೇಳಿನ ಪಳೆಯುಳಿಕೆಯಂತೆ ಕಂಡವು.

ಭಯದಿಂದ ನೀರಿಗಿಳಿಯಲು ಮೊದಲು ನಿರಾಕರಿಸಿದ ಅಮ್ಮ , ಒತ್ತಾಯಕ್ಕೆ ಮಣಿದು, ನೀರಿಗಿಳಿದು ನಲಿದ ಕ್ಷಣ ಕೋಟಿ ಹಣ ಕೊಟ್ಟರೂ ಮರಳಿಬಾರದು. ಅಲೆಗಳು ಧುಮುಧುಮುಕಿ ಬರುತಲಿರಲು ಬಾಚಿ ತಬ್ಬುವ ತವಕವು. ಭೂತಾಯಿಯ ಸಹೋದರಿ ಅವಳಿಗಿಂತ ಸುಂದರಿ. ಸಕ್ಕರೆಯಂತಿರುವ ಮರಳ ಮೇಲೆ ನಿಂತ ನಮ್ಮನ್ನು ಬರಸೆಳೆದು ಅಪ್ಪಿಕೊಳ್ಳಲೋ ಎಂಬಂತೆ ಓಡೋಡಿ ಬರುತ್ತಿದ್ದ ಅಲೆಗಳು ಪಾದಗಳಿಗೆ ಕಚಗುಳಿ ಇಟ್ಟು, ಮರಳನ್ನು ಕೊಚ್ಚಿ, ಜಾರುವಂತೆ ಮಾಡುತ್ತಿತ್ತು. ಕೂತರೆ ಹತ್ತಿಉಂಡೆಯೋ ಎಂಬಂತೆ ಎತ್ತಿ ಎಸೆಯುತ್ತಿತು.

ಗಗನದಂಚು ಮೀರಿ ತುಳುಕುವ ಜಲಸಾಗರ ಕಂಡು ನಕ್ಕುನಲಿಯದಿರಲು ಎಂಥ ಗಂಭೀರ ಮನಸ್ಸುಗಳಿಗೂ ಸಾಧ್ಯವಿಲ್ಲ. ಹಿಟ್ಲರಿನಂಥ ಸರ್ವಾಧಿಕಾರಿಯೂ ಕಡಲ ಚೆನ್ನಾಟದ ಮುಂದೆ ಶರಣಾಗದೇ ಇರಲಾರ. ಮನಸ್ಸು ಹೇಳಿತು. ಬರಿಯ ಉಪ್ಪು ಎಂದು ಜರಿಯಬೇಡವೋ, ಉಪ್ಪಿನಿಂದಲೇ ಅಡುಗೆ ಸುಂದರ. ಬಹುಶ: ದೇವರು ದೂರಾಲೋಚನೆಯಿಂದ ಕಡಲನ್ನು ಉಪ್ಪಾಗಿಸಿದ ಎನಿಸುತ್ತದೆ.

ಇಲ್ಲದಿದ್ದರೆ ಮನುಷ್ಯ ಕಡಲಿನ ನೀರು ಮತ್ತು ಮರಳನ್ನು ನಗರಗಳಿಗೆ ಸಾಗಿಸಿಬಿಡುತ್ತಿದ್ದ. ಆದರೂ ಮನುಷ್ಯ ಅಡುಗೆಗಾಗಿ ಉಪ್ಪು , ಬಯಕೆಗಾಗಿ ಮುತ್ತು ರತ್ನ ಹವಳ, ತೈಲಕ್ಕಾಗಿ ಸಮುದ್ರದೊಡನೆ ನಂಟನ್ನು ಬೆಳೆಸಿಕೊಂಡ, ಕಡಲ ತಡಿಗಳಲ್ಲೆ ನಗರಗಳನ್ನು ಕಟ್ಟಿದ. ಅಲೆಗಳ ಪ್ರೀತಿಯ ಸಂತೈಸುವಿಕೆಗೆ ಅಮ್ಮಂದಿರು, ತಂಗಿಯರು, ಅಜ್ಜಿ, ಸೋದರಮಾವ, ಚಿಕ್ಕಪ್ಪ ಇವರೆಲ್ಲರ ಮುಖಗಳು ಧನ್ಯೋಸ್ಮಿ. ನೀರಿನಲ್ಲಿ ಚಡ್ಡಿ ಬಿಚ್ಚಿಹೋದರೂ ಪರಿವಿಲ್ಲದೇ ನಲಿಯುತ್ತಿದ್ದ ಪಟ್ಟ ತಮ್ಮ ದಿಶುವನ್ನು ಕಂಡ ಸೂರ್ಯನಂತು ಅವನೊಡನೆ ಆಡಲಿಕ್ಕೆ ಎಂಬಂತೆ ಕೆಳಗಿಳಿಯತೊಡಗಿದ.

ಕಣ್ಣು ಚಾಚಿದಷ್ಟು ದೂರ ದಿಗ್‌ದಿಗಂತದವರೆಗೆ ನೀರ ಆಗರ, ಮೇರೆಯಿರದ ಸಾಗರ, ಮುಳುಗುತ್ತಿದ್ದ ಭಾಸ್ಕರ, ಕ್ಷಣಕ್ಷಣಕ್ಕೂ ಸುಂದರ. ಅಲ್ಲಿಂದ ಮೀನು ಮಾರುಕಟ್ಟೆಗೆ ತೆರಳಿ ಅಲ್ಲಿ ಸ್ಥಳೀಯರಲ್ಲಿ ಮೀನುಗಳ ಪರಿಚಯ ಮಾಡಿಕೊಂಡ ನೆನಪು. ಬೂತಾಯಿ, ಬೊಳಂಜಿರ್, ಮಂಙ್ಝು, ಕುರ್ಚೆ, ಚಟಿ ಇವುಗಳನ್ನು ಕಂಡು ಬಾಯಲ್ಲಿ ನೀರೂರಿದ್ದು ಮತ್ತು ಫೋಟೊ ಕ್ಲಿಕ್ಕಿಸಲು ನಮ್ಮ ಸೂರಿ ಮಾಮ ಕ್ಯಾಮೆರಾ ಹಿಡಿದಾಗ ಸೂರ್ಯನ ಮುಖ ನಾಚಿ ಕೆಂಪಾದದ್ದು ಸವಿ ಸವಿನೆನಪು. ■